

# ಲಲಿತಾ ಕೆ. ಹೊಸಪ್ಯಾಟಿ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ಎರಡು ಸಾವಿರಕ್ಕೂ ಹೆಚ್ಚು ರಂಗಪ್ರದರ್ಶನಗಳಲ್ಲಿ ನಟಿಸಿದ ಹಿರಿಯ ರಂಗ ಕಲಾವಿದೆ ಮರಿಯಮ್ಮನಹಳ್ಳಿ ಕೆ. ನಾಗರತ್ನಮ್ಮ ಕಳೆದ 55 ವರ್ಷಗಳಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಬಳ್ಳಾರಿ, ಕೊಪ್ಪಳ, ರಾಯಚೂರು, ದಾವಣಗೆರೆ, ಗದಗ, ಆಂಧ್ರಪ್ರದೇಶ ಗಡಿನಾಡಿನ ಹಳ್ಳಿಗಳಲ್ಲಿ ನಾಟಕ ಪ್ರದರ್ಶನ ನೀಡಿದ ಈ ಕಲಾವಿದೆ ಪ್ರತಿಭಾವಂತ ನಟಿ. ಅಖಂಡ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿಯ ಕೃಷಿಕ ಕುಟುಂಬದ ಮಾರೆಪ್ಪ–ಸಿದ್ದಮ್ಮ ದಂಪತಿಯ ಮಗಳಾಗಿ 1952ರಲ್ಲಿ ನಾಗರತ್ನಮ್ಮ ಜನಿಸಿದರು. ಕೃಷಿ ಪರಿಸರದ ಹಿನ್ನೆಲೆಯಿದ್ದರೂ, ತಂದೆಯ ಪ್ರೋತ್ಸಾಹ, ಮನೆಯವರಿಂದ ದೊರೆತ ಮುಕ್ತ ಅವಕಾಶದಿಂದಲೇ ಉತ್ತಮ ಕಲಾವಿದೆಯಾಗುವುದು ಸಾಧ್ಯವಾಯಿತು ಎನ್ನುವುದು ಅವರ ಅನಿಸಿಕೆ. ಸಹಜ ಅಭಿನಯ, ಸರಳ ನಡವಳಿಕೆ ಅವರ ಆಸ್ತಿ. ಹಿನ್ನೆಲೆ ಗಾಯನಕ್ಕೂ ಸೈ ಎನ್ನಿಸುವ ಧ್ವನಿ. ‘ಶೀಲಾವತಿ’ ನಾಟಕದಲ್ಲಿ ಶೀಲಾವತಿ ಪಾತ್ರದ ಮೂಲಕ ಗ್ರಾಮೀಣ ವೃತ್ತಿರಂಗಭೂಮಿಯಲ್ಲಿ ಮಹಿಳಾ ಪ್ರಧಾನ ಪಾತ್ರಕ್ಕೆ ಪೀಠಿಕೆ ಹಾಕಿ ಪ್ರೇಕ್ಷಕರ ಮನಗೆದ್ದವರು. ಬಣ್ಣದ ಬದುಕಿನ ಪಯಣದಲ್ಲಿ ನಟನೆಯ ಎಲ್ಲಾ ಪಾತ್ರಗಳನ್ನೂ ತಲ್ಲೀನತೆಯಲ್ಲಿ ಅಭಿನಯಿಸಿದ ಉಪಾಸಕಿ. 74ರ ಈ ವಯಸ್ಸಿನಲ್ಲಿಯೂ ವಿಶ್ರಾಂತಿ ಪಡೆಯದೇ ನಟಿಸುತ್ತಿರುವ ಹಿರಿಯ ಕಲಾವಿದೆ, ‘ರಂಗಭೂಮಿಗೆ ನಾನೇನೂ ಕೊಡಲಿಲ್ಲ. ರಂಗಭೂಮಿಯಿಂದ ಪಡೆದದ್ದೇ ಹೆಚ್ಚು’ ಎನ್ನುವ ವಿನಯಶೀಲೆ. ಇತ್ತೀಚೆಗೆ ‘ಗುಬ್ಬಿ ವೀರಣ್ಣ’ ಪ್ರಶಸ್ತಿಗೆ ಭಾಜನರಾಗಿರುವ ಅವರು ಮಾತಿಗೆ ಸಿಕ್ಕಾಗ, ತಾನು ರಂಗಭೂಮಿಗೆ ಬಂದದ್ದೇ ಒಳ್ಳೆಯದಾಯಿತು ಎನ್ನುತ್ತ ಸಂಭ್ರಮಿಸಿದರು. ಅವರೊಡನೆ ನಡೆದ ಮಾತುಕತೆಯ ಆಯ್ದ ಭಾಗ **‘ಮಯೂರ’** ಓದುಗರಿಗಾಗಿ ಇಲ್ಲಿದೆ:

